ಸಿ. ಸಿ. ನಂ.- **252/2021**

ಡಿ. ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **26-03-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ದೂರುದಾರರಿಂದ ಶ್ರೀ ಎಸ್ ಅರ್ ಎಸ್ ಜೆ ವಕೀಲರಿಂದ -

ನಾನು ಬಿ.ಕಾಮ್ ಪದವಿಯನ್ನು ಅಪೂರ್ಣಗೊಳಿಸಿರುತ್ತೇನೆ. ನನಗೆ ಟ್ರಾನ್ಸ್ ಪೋರ್ಟ್ ಗೆ ಸಂಬಂದಪಟ್ಟ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ಬೇರೆ ವ್ಯವಹರ ಜ್ಞಾನ ಇಲ್ಲ. ನಾನು **2009** ರಿಂದ ಟ್ರಾನ್ಸ್ ಪೋರ್ಟ್ ವ್ಯವಹಾರ ಮಾಡುತ್ತಿದ್ದೇನೆ. ನಾನು ಸ್ವಂತ ವ್ಯವಹಾರ ಶುರು ಮಾಡುವ ಮೊದಲು ರಾಜಶ್ರೀ ಆಟೋ ಮೊಬೈಲ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ರಾಜಶ್ರೀ ಆಟೋ ಮೊಬೈಲ್ಸ್ ಪಕ್ಕ ದೂರುದಾರರ ಅಂಗಡಿ ಇತ್ತು ಎಂದರೆ ಸರಿ. ಅದಕ್ಕೂ ಮೊದಲು ನಾನು ಹುಸೇನ್ ಶಾ ಗ್ರುಪ್ಸ್ ನಲ್ಲಿ ಟ್ರಾನ್ಸ್ ಪೋರ್ಟ್ ಸೂಪರ್ ವೈಸರ್ ಕೆಲಸ ಮಾಡುತ್ತಿದ್ದೆ. ಹುಸೇನ್ ಶಾ ಗ್ರುಪ್ಸ್ ರವರು ದೂರುದಾರರ ಅಂಗಡಿಯಿಂದ ವಾಹನದ ಬಿಡಿ ಭಾಗಗಳನ್ನು ಖರೀದಿ ಮಾಡುತ್ತಿದ್ದರು ಎಂದರೆ ಸರಿ. ದೂರುದಾರರು ನನಗೆ **1994** ರಿಂದ ಪರಿಚಯ. ಹುಸೇನ್ ಶಾ ಗ್ರುಪ್ಸ್ ನಲ್ಲಿ ಕೆಲಸ ಮಾಡುವಾಗ ನನಗೆ ತಿಂಗಳಿಗೆ ರೂ. **750** ರಿಂದ ಶುರು ಮಾಡಿ ನಾನು ಕೆಲಸ ಬಿಡುವಾಗ ರೂ.**7** ಸಾವಿರವರೆಗೂ ಸಂಬಳ ಕೊಡುತ್ತಿದ್ದರು. ರಾಜಶ್ರಿ ಆಟೋ ಮೊಬೈಲ್ಸ್ ನಲ್ಲಿ ತಿಂಗಳಿಗೆ **2,500.00** ಸಂಬಳ ಕೊಡುತ್ತಿದ್ದರು.

**2.** ನಾನು ಮೊದಲು ಖರೀದಿ ಮಾಡಿದ ಲಾರಿ ವಾಹನ ನಂಃ ಅರ್ ಜೆ **13** ಜಿ **9834** ಎಂದರೆ ಸರಿ. ಅದನ್ನು ನಾನು **2009** ರಲ್ಲಿ ರೂ. **3,60,000.00** ಕ್ಕೆ ಬಳ್ಳಾರಿಯ ಶ್ರೀರಾಮ ಫೈನಾನ್ಸ್ ನಲ್ಲಿ ಹರಾಜಿನಲ್ಲಿ ಖರೀದಿ ಮಾಡಿದ್ದೆ. ಆ ಸಮಯದಲ್ಲಿ ನಾನು ರೂ. **10** ಸಾವಿರ ಡೌನ್ ಪೇಮೆಂಟ್ ಮಾಡಿ ರೂ. **3** ಲಕ್ಷ **50** ಸಾವಿರಕ್ಕೆ ಶ್ರೀರಾಮ ಫೈನಾನ್ಸ್ ನಲ್ಲಿ ಸಾಲ ಮಾಡಿದ್ದೆ. ಆ ಸಮಯದಲ್ಲಿ ನಾನು ದೂರುದಾರರಿಂದ ರೂ. **1** ಲಕ್ಷ **50** ಸಾವಿರ ಸಾಲ ಪಡೆದಿದ್ದೆ. ನನ್ನ ಬಳಿ ವಾಹನ ಖರೀದಿ ಮಾಡಲು ಆರ್ಥಿಕ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಬಳಿ ರೂ. **1** ಲಕ್ಷ **20** ಸಾವಿರ ನಗದು ಇತ್ತು. ಅದನ್ನು ನಾನು ಬಂಗಾರವನ್ನು ಒತ್ತೆ ಇಟ್ಟು ತಂದಿದ್ದೇನು. ಆಗ ನನ್ನ ಬಳಿ ರೂ. **20** ಅಥವಾ ರೂ. **40** ಸಾವಿರ ಸ್ವಂತ ಹಣ ಇತ್ತು.

3. ರಾಜಶ್ರೀ ಆಟೋ ಮೊಬೈಲ್ಸ್ ನಲ್ಲಿ ನಾನು ಕೆಲಸ ಮಾಡುವಾಗ ಬಾಡಿಗೆ ಮನೆಯಲ್ಲಿ ವಾಸವಿದ್ದೆ. ಮನೆಯ ಬಾಡಿಗೆ ರೂ. 1250.00 ಇತ್ತು. ನನಗೆ ಆಗ ಬರುತ್ತಿದ್ದ ತಿಂಗಳ ರೂ. 2,500.00 ಸಂಬಳ ಮನೆ ಖರ್ಚಿಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿ. ನನಗೆ ಹಣದ ಅವಶ್ಯಕತೆ ಇದಿದ್ದರಿಂದ ಮೇಲೆ ಹೇಳಿದ ನನ್ನ ಲಾರಿ ವಾಹನವನ್ನು ಖರೀದಿ ಮಾಡಿ ಎಂದು ದೂರುದಾರರಿಗೆ ಹೇಳಿದ್ದೆ ಎಂದರೆ ಸರಿ. ದೂರುದಾರರು ಹಣ ಕಾಸಿನ ಸಹಾಯ ಮಾಡಿದ ನಂತರ ನಾನು ಟ್ರಾನ್ಸ್ ಪೋರ್ಟ್ ವ್ಯವಹಾರ ಶುರು ಮಾಡಿದ್ದೆ ಎಂದರೆ ಸರಿಯಲ್ಲ.

4. ನಾನು ಟ್ರಾನ್ಸಪೋರ್ಟ್ ವ್ಯವಹಾರ ಮಾಡುವಾಗ ಬೇರೆ ಲಾರಿ ಮಾಲೀಕರಿಂದ ಲಾರಿ ಪಡೆಯುತ್ತಿದ್ದೆ ಎಂದರೆ ಸರಿ. ನಾನು ಆ ರೀತಿ ಸುಮಾರು 50 ಲಾರಿಗಳನ್ನು ನಡೆಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಮಜ್ಜಗಿ ನಾಗರಾಜ, ಯಮನೂರಪ್ಪ, ಸುರೇಶ ಮಜ್ಜಗಿ, ಪುತ್ರಪ್ಪ, ರಾಯಪ್ಪ, ಗವಿಸಿದ್ದಪ್ಪ, ಸಚೀನ್ ಜಗತ್ತಾಪ್, ಮಾರುತಿ ಮಜ್ಜಗಿ, ರವಿ ಮಜ್ಜಗಿ, ಶೇಷಪ್ಪ ಮಜ್ಜಗಿ, ಶರಣಪ್ಪ ಬಗನಾಲ್, ಮೈನುದ್ದಿನ್, ಹನುಮತಂಪ್ಪ ಗಿಣಗೇರಾ ಇವರೆಲ್ಲರಿಂದಲೂ ಲಾರಿಗಳನ್ನು ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಜನರು ನನಗೆ ಪರಿಚಯ ಎಂದರೆ ಸರಿ. ನಾನು ಕೇವಲ ಸುರೇಶ ಮಜ್ಜಗಿ, ಶೇಷಪ್ಪ ಮಜ್ಜಗಿ, ಮಜ್ಜಗಿ ನಾಗರಾಜ, ಪುತ್ರಪ್ಪ, ಗವಿಸಿದ್ದಪ್ಪ ರವರಿಂದ ಲಾರಿ ಪಡೆಯುತ್ತಿದ್ದೆ. ನಾನು ಮೇಲೆ ಹೇಳಿದ ಜನರೆಲ್ಲರಿಗೂ ದೂರುದಾರರಿಂದ ಟಯರ್ ಗಳನ್ನು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೇವಲ ನಾಗರಾಜ ಮಜ್ಜಗಿ ರವರೆಗೆ ಟಯರ್ ಗಳನ್ನು ಕೊಡಿಸಿರುತ್ತೇನೆ. ಅವರಿಗೆ ಎಷ್ಟು ಟಯರ್ ಗಳನ್ನು ಕೊಡಿಸಿರುತ್ತೇನೆ ಎಂದು ನೆನಪಿಲ್ಲ. ಸಿಸಿ ನಂಃ 311/2021 ರಲ್ಲಿನ ನಿಡಿ 1 ಮತ್ತು 2 ದಾಖಲೆಯಲ್ಲಿ ನಮೂದು ಆಗಿರುವ ಹಣವನ್ನು ನಾನು ಲಾರಿ ಮಾಲೀಕರಿಗೆ ಪಾವತಿ ಮಾಡಬೇಕಾಗಿತ್ತು ಎಂದರೆ ಸರಿ. ನಾನು ಹಣವನ್ನು ಸೆಲ್ಫ ಚೆಕ್ ಮೂಲಕ ಬಿಡಿಸಿಕೊಂಡು ನನ್ನ ಮಗನ ಮೂಲಕ ನಗದು ರೂಪದಲ್ಲಿ ಲಾರಿ ಮಾಲೀಕರಿಗೆ ಕೊಡುತ್ತಿದ್ದೆ.

5. ಎ ಎಸ್ ಕೆ ಎಂಟರ್ ಪ್ರೈಸಸ್ಸ್ ರವರದ್ದು ಹೀರೆಬಾಗಿನಾಳ ರಲ್ಲಿ ಪೇಟ್ರೋಲ್ ಬಂಕ್ ಇರುತ್ತದೆ. ಅಲ್ಲಿ ನಾನು ನನ್ನ ಲಾರಿ ವಾಹನಕ್ಕೆ ಮತ್ತು ಮೇಲೆ ಹೇಳಿದ ಜನರ ಲಾರಿಗಳಿಗೆ ಡಿಜಲ್ ಹಾಕಿಸುತ್ತಿದ್ದೆ ಎಂದರೆ ಸರಿ. ನಿಡಿ 1 ಮತ್ತು 2 ರಲ್ಲಿ ತೋರಿಸಿರುವ ಹಣ ನಾನೇ ಖುದ್ದಾಗಿ

ಬಿಡಿಸಿಕೊಂಡ ಹಣ ಅಲ್ಲ ಎಂದರೆ ಸಾಕ್ಷಿಯು ತಾನು ಕೆಲವೊಮ್ಮೆ ಖುದ್ದಾಗಿ ಹೋಗುತ್ತಿದ್ದೆ ಕೆಲವೊಮ್ಮೆ ತನ್ನ ಮಗ ಹೊಗುತ್ತಿದ್ದುದ್ದಾಗಿ ನುಡಿಯುತ್ತಾರೆ. ನಾನು ನನ್ನ ಮಗ ಹೊರತುಪಡೆಸಿ ಬೇರೆ ಯಾರು ನನ್ನ ಖಾತೆಯಲ್ಲಿ ಸೇಲ್ಫ ಚೆಕ್ ಮೂಲಕ ಹಣವನ್ನು ಬಿಡಿಸಿಕೊಳ್ಳುತ್ತಿರಲಿಲ್ಲ.

6. ದೂರುದಾರರಿಂದ ರೂ. 1 ಲಕ್ಷ 50 ಸಾವಿರ ಹೊರತು ಪಡೆಸಿ ನಾನು ರೂ. 3 ಲಕ್ಷ 20 ಸಾವಿರ ಹಣವನ್ನು ಪಡೆದಿದ್ದೆ. ಅದು ಬಿಟ್ಟು ಬೇರೆ ಹಣ ಪಡೆದಿಲ್ಲ. ರೂ. 3 ಲಕ್ಷ 20 ಸಾವಿರ ಹಣ ಪಡೆದ ಬಗ್ಗೆ ನಾನು ಎಲ್ಲಿಯೂ ಬರೆದು ಇಟ್ಟಿರುವುದಿಲ್ಲ. ಸದರಿ ಹಣವನ್ನು ನಾನು 2011 ರಿಂದ 2013 ರಲ್ಲಿ ನನಗೆ ಅವಶ್ಯಕತೆ ಇದ್ದಾಗ ಪಡೆದಿದ್ದೆ. ಎಷ್ಟು ಹಣವನ್ನು ಯಾವಾಗ ಪಡೆದಿದ್ದೆ ಎಂದು ನಿಖರವಾಗಿ ನೆನಪಿಲ್ಲ.

7. ಲಾರಿ ಮಾಲೀಕರಿಗೆ ಅನ್ ಲೋಡ್ ಆದ ತಕ್ಷಣ ಪೇಮೆಂಟ್ ಮಾಡಬೇಕು ಎಂದರೆ ಸರಿಯಲ್ಲ. ಫ್ಯಾಕ್ಟರಿಯವರು ಹಣವನ್ನು ರಿಲಿಸ್ ಮಾಡಿದಾಗ 15 ದಿನಕೊಮ್ಮೆ ಪೇಮೆಂಟ್ ಮಾಡಬೇಕು. ಫ್ಯಾಕ್ಟರಿಯವರು 15 ದಿನಕೊಮ್ಮೆ ಪೇಮೆಂಟ್ ಮಾಡುತ್ತಿದ್ದರು. ಟ್ರಾನ್ಸ್ ಪೊರ್ಟ್ ವ್ಯವಹಾದ ಬಗ್ಗೆ ಎಲ್ಲಾ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಲಾರಿ ಮಾಲೀಕರಿಗೆ ಅನ್ ಲೋಡ್ ಆದ ತಕ್ಷಣ ಪೇಮೆಂಟ್ ಮಾಡಬೇಕು ಎಂದು ನಾನು ಹಲವಾರು ಬಾರಿ ದೂರುದಾರರಿಂದ ಹಣ ಪಡೆದಿದ್ದೆ ಎಂದರೆ ಸರಿಯಲ್ಲ. ಹಣ ಪಡೆಯುವಾಗ ನಾನು ಪ್ರತಿ ಬಾರಿ ಪ್ರಾಮಿಸರಿ ನೋಟ್ ಬರೆದುಕೊಡುತ್ತಿದ್ದೆ ಎಂದರೆ ಸರಿಯಲ್ಲ. ಕೇವಲ ಒಮ್ಮೆ ಮಾತ್ರ ಪ್ರಾಮಿಸರಿ ನೋಟ್ ಬರೆದುಕೊಟ್ಟಿರುತ್ತೇನೆ. ಬೇರೆ ದಾಖಲೆ ಬರೆದುಕೊಟ್ಟಿರುವುದಿಲ್ಲ.

8. ನಾನು ಚಿತ್ತವಾಡಗಿಯಲ್ಲಿ ಮನೆ ಖರೀದಿ ಮಾಡುವ ಕಾಲಕ್ಕೆ ದೂರುದಾರರಿಂದ ಹಣ ಪಡೆದಿದ್ದೆ ಎಂದರೆ ಸರಿಯಲ್ಲ. ನನಗೆ ತುರ್ತಾಗಿ ಹಣದ ಅವಶ್ಯಕತೆ ಇದ್ದಾಗ ದೂರುದಾರರು ತನ್ನ ಕುಟುಂಬದ ಸದಸ್ಯರಿಂದ ಹಣ ಪಡೆದು ನನಗೆ ಹಣದ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಟ್ರಾನ್ಸಪೊರ್ಟ್ ವ್ಯವಹಾರದಿಂದ ನನಗೆ ಪ್ರತಿ ಟನ್ ಗೆ ರೂ. 2 ರಿಂದ 5 ಆದಾಯ ಬರುತ್ತದೆ ಎಂದರೆ ಸಾಕ್ಷಿಯು ರೂ. 7 ಬರುತ್ತದೆ ಎಂದು ನುಡಿಯುತ್ತಾರೆ. ಟ್ರಾನ್ಸಪೊರ್ಟ್ ವ್ಯವಹಾರ ಮಾಡುವವರಿಗೆ ಯಾವಾಗಲೂ ಹಣದ ಅವಶ್ಯಕತೆ ಇರುತ್ತದೆ ಎಂದರೆ ಸರಿಯಲ್ಲ. ಕಾರ್ಪೋರೇಷನ್

ಬ್ಯಾಂಕಿನ ಓ.ಡಿ/01/140008 ಖಾತೆ ಆಗಿರುತ್ತದೆ. ಅದರಲ್ಲಿ ರೂ. 5 ಲಕ್ಷ ಓ.ಡಿ ಲಿಮಿಟ್ ಇದೆ ಎಂದರೆ ಸರಿ. ಓ.ಡಿ/01/150003 ರಲ್ಲಿ ರೂ. 7 ಲಕ್ಷ ಓ.ಡಿ ಲಿಮಿಟ್ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಾರ್ಪೋರೇಷನ್ ಬ್ಯಾಂಕ್ ಯುನಿಯನ್ ಬ್ಯಾಂಕ್ ಆದಾಗ ಓ.ಡಿ ಲಿಮಿಟ್ ರೂ. 2 ಲಕ್ಷ ಹೆಚ್ಚು ಮಾಡಿದ ಬಗ್ಗೆ ದಾಖಲೆ ಆಗಿರುತ್ತದೆ ಎಂದು ನುಡಿಯುತ್ತಾರೆ.

9. ನಾನು 2012 ರಲ್ಲಿ ರೂ. 7 ಲಕ್ಷ ಮನೆ ಸಾಲ ಪಡೆದಿದ್ದೆ. 2019 ರಲ್ಲಿ ರೂ, 25 ಲಕ್ಷ ಸಾಲ ಪಡೆದಿದ್ದೆ. ನಾನು ಒಟ್ಟು ರೂ. 38 ಲಕ್ಷ ಸಾಲ ಮಾಡಿದ್ದೆ. ಈಗ ಅದು ರೂ. 31 ಲಕ್ಷ ಬಾಕಿ ಇರುತ್ತದೆ. ಸದರಿ ಸಾಲ ಎನ್.ಪಿ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಿಬಿಲ್ ಸ್ಕೋರ್ಕ್ ಹೇಳಲಾಗುವುದಿಲ್ಲ. ನಾನು ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಸಾಲ ಮರುಪಾವತಿ ಮಾಡುವಲ್ಲಿ ವಿಫಲಾನಾಗಿದ್ದೆನೆ ಎಂದರೆ ಸರಿಯಲ್ಲ. ದಾಖಲೆ ಇರಬಾರದು ಎಂಬ ಕಾರಣಕ್ಕೆ ನಾನು ಸೇಲ್ಫ್ ಚೆಕ್ ಮೂಲಕ ಹಣ ಪಾವತಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸೇಲ್ಫ್ ಚೆಕ್ ಮೂಲಕ ಯಾರ ಹಣ ಬಿಡಿಸಿಕೊಂಡು ಹೋಗಿರುತ್ತಾರೆ ಎಂಬ ಬ್ಯಾಂಕಿನಲ್ಲಿ ಮಾಹಿತಿ ಇದೆ ಎಂದರೆ ಸರಿ. ಅದನ್ನು ಹಾಜರುಪಡಿಸಲು ತೊಂದರೆ ಇದೆ.

10. ನಿಡಿ 1 ಮತ್ತು 2 ರಲ್ಲಿ ನಾನು ನೀಡಿದ ಚೆಕ್ ಅಮಾನ್ಯ ಆದ ಬಗ್ಗೆ ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಚೆಕ್ ನೀಡಿದ ನಂತರ 2-3 ದಿನದ ನಂತರವೂ ಹಣ ಹೊಂದಾಣಿಕೆ ಆಗದೆ ಇದ್ದಾಗ ಲಾರಿ ಮಾಲೀಕರು ಮನೆ ಬಳಿ ಬರುತ್ತಿದ್ದು ಪಾವತಿ ವಿಳಂಬ ಆದಾಗ ಚೆಕ್ ಅಮಾನ್ಯ ಆಗಿದ್ದು ಇರುತ್ತದೆ. ಲಾರಿ ಮಾಲೀಕರಿಗೆ ಸೇಲ್ಫ್ ಚೆಕ್ ಮೂಲಕ ಪೇಮೆಂಟ್ ಮಾಡುತ್ತಿದ್ದೆ. ನನ್ನ ಖಾತೆಯಲ್ಲಿ ಕನಿಷ್ಟ ಮೊತ್ತ ಇರದ ಕಾರಣಕ್ಕಾಗಿ ಬ್ಯಾಂಕ್ ನವರು ದಂಡ ವಿಧಿಸಿರುತ್ತಾರೆ ಎಂದರೆ ಸರಿಯಲ್ಲ.

11. ಆದಾಯ ತೆರಿಗೆ ಪಾವತಿ ಮಾಡುವಾಗ ನಮ್ಮ ಎಲ್ಲಾ ದಾಖಲೆಗಳನ್ನು ಲೆಕ್ಕ ಪರಿಶೋಧಕರಿಗೆ ಕೊಡುವುದಿಲ್ಲ. ನಾವು ಯಾರಿಗೆ ಹಣ ಪಾವತಿ ಮಾಡುವುದು ಬಾಕಿ ಇದೆ ಮತ್ತು ಯಾರಿಂದ ಹಣ ಬರುವುದು ಇದೆ ಎಂಬ ಮಾಹಿತಿಯನ್ನು ಕೊಡುವುದಿಲ್ಲ. ಸಾಲ ಪಡೆಯುವಾಗ ನಾನು ನೀಡಿದ ದಾಖಲೆಗಳನ್ನು ಸಾಲ ಮರುಪಾವತಿ ಮಾಡಿದ ನಂತರ ನಾನು ವಾಪಸ್ಸು ಪಡೆಯುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ನೇಹದ ಆಧಾರದ ಮೇಲೆ ಕೆಲವೊಂದು

ದಾಖಲೆಗಳನ್ನು ಅವರ ಬಳಿಯೇ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 2008 ರಿಂದ 2021 ರವರೆಗೆ ನಾನು ದೂರುದಾರರ ಜೊತೆ ವ್ಯವಹಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರರ ಜೊತೆ ದಿಃ 20.04.2009 ರಿಂದ 2014 ರವರೆಗೆ ವ್ಯವಹಾರ ಮಾಡಿದ್ದೇನೆ. 2014 ರ ನಂತರ ನಾನು ದೂರುದಾರರ ಜೊತೆ ಯಾವುದೆ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ನಾನು ದೂರುದಾರರಿಂದ ರೂ.4,90,000.00 ಹಣವನ್ನು ಪಡೆದು ಅವರಿಗೆ 2014 ರವರೆಗೂ ಬಡ್ಡಿ ಮತ್ತು ಚಕ್ರ ಬಡ್ಡಿ ಸೇರಿಸಿ ಸುಮಾರು ರೂ. 13 ಲಕ್ಷದವರೆಗೂ ಪಾವತಿ ಮಾಡಿದ್ದೇನೆ.

12. ನಾನು ದೂರುದಾರರ ಬಳಿ ರೂ. 1 ಲಕ್ಷ ಮೊತ್ತದ ಟಯರ್ ಗಳ ವ್ಯವಹಾರ ಮಾಡಿದ್ದೇನೆ. ಅದನ್ನು ಹೊರತುಪಡಿಸಿ ಬೇರೆ ಟಯರ್ ವ್ಯವಹಾರ ಮಾಡಿಲ್ಲ. ಸದರಿ ಟಯರ್ ನ್ನು ನಮ್ಮ ಸ್ವಂತ ವಾಹನಕ್ಕೆ ಹಾಕಿದ್ದೇವು.

13. ಜಕಿವುಲ್ಲಾ ನನಗೆ ಪರಿಚಯವಿಲ್ಲ. ದೂರುದಾರರು ನನಗೆ ಖಾನ್ ಟಯರ್ಸ್ ನಿಂದ ಟಯರ್ ಗಳನ್ನು ಕೊಡಿಸಿದ್ದರು ಎಂದರೆ ಸರಿಯಲ್ಲ. ದೂರುದಾರರ ಅಣ್ಣ ಮತ್ತು ಎಂ ಅರ್ ಎಫ್ ರವರಿಂದ ನಾನು ಟಯರ್ಸ್ ಖರೀದಿ ಮಾಡಿದ್ದೇನು ಎಂದರೆ ಸರಿಯಲ್ಲ. 2016 ರಲ್ಲಿ ದೂರುದಾರರು ಟಯರ್ ವ್ಯವಹಾರ ನಿಲ್ಲಿಸಿದ ನಂತರ ನಾನು ನೇರವಾಗಿ ಖಾನ್ ಟಯರ್ಸ್ ನಿಂದ ಟಯರ್ ಗಳನ್ನು ಖರೀದಿ ಮಾಡುತ್ತಿದ್ದೆ ಎಂದರೆ ನನಗೆ ನೆನಪಿಲ್ಲ.

(ಈ ಹಂತದಲ್ಲಿ ದೂರುದಾರರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.

ಸಿ. ಸಿ. ನಂ.- **252/2021**

ಡಿ. ಡಬ್ಲ್ಯೂ- **1**